## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1134 |
| ಮಾನ್ಯ ಸದಸ್ಯರ ಹೆಸರು | : ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : 07.03.2022 |
| ಉತ್ತರಿಸುವ ಸಚಿವರು | : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಬಡವರು ಮತ್ತು ಅಶಕ್ತರಿಗೆ ಒದಗಿಸುತ್ತಿರುವ ಆರೋಗ್ಯ ಸೇವೆಗಳು ಯಾವುವು; (ವಿವರ ನೀಡುವುದು) | ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ವತಿಯಿಂದ ಬಿಪಿಎಲ್ ಮತ್ತು ಎಪಿಎಲ್ (ಸಹ ಪಾವತಿ ಆದಾರದ ಮೇಲೆ) ಕಾರ್ಡುದಾರರಿಗೆ ರಾಜ್ಯದಲ್ಲಿ ಜಾರಿಯಲ್ಲಿರುವ ಉಚಿತ ಆರೋಗ್ಯ ಯೋಜನೆಗಳು ಈ ಕೆಳಗಿನಂತಿವೆ:<br>1. ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ ಯೋಜನೆ<br>2. ಅಂಗಾಂಗ ಕಸಿ ಯೋಜನೆ.<br>ಇದಲ್ಲದೇ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಒದಗಿಸುತ್ತಿರುವ ಆರೋಗ್ಯ ಸೇವೆಗಳು ಈ ಕೆಳಕಂಡಂತಿರುತ್ತವೆ:<br>1. ಮಾನಸಿಕ ರೋಗಿಗಳಿಗೆ ಉಚಿತ ಚಿಕಿತ್ಸೆ<br>2. ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆ, ಕಣ್ಣಿನ ಚಿಕಿತ್ಸೆ, ಕೋವಿಡ್-19ರ ಲಸಿಕೆ ಹಾಗೂ ಔಷಧ ಉಪಚಾರ<br>3. ಗರ್ಬಿಣಿ ಮಹಿಳೆಯರಿಗೆ ಪ್ರಸೂತಿಯ ಸಂದರ್ಭದಲ್ಲಿ ನಗುಮಗು ಅಂಬುಲೆನ್ಸ ಮೂಲಕ ಉಚಿತ ಸೇವೆ.<br>4. ಅಪಘಾತ ಹಾಗೂ ಇತರೆ ತುರ್ತು ಸಂದರ್ಭದಲ್ಲಿ ಆರೋಗ್ಯ ಸೇವೆಗಳಿಗಾಗಿ 108 ಆಂಬ್ಯುಲೆನ್ಸ್ ಸೇವೆ<br>5. ಜನನಿ ಸುರಕ್ಷಾ ಯೋಜನೆ.<br>6. ನಿಕ್ಷಯ ಪೊಷಣೆ ಅಡಿಯಲ್ಲಿ ಪ್ರತಿ ಕ್ಷಯ ರೋಗಿಗಳಿಗೆ ಪೂರ್ಣ ಚಿಕಿತ್ಸೆ ಆಗುವವರೆವಗೂ ಮಾಸಿಕ ರೂ.500/- ಪೌಷ್ಠಿಕ ಆಹಾರದ ಸಲುವಾಗಿ ಗೌರವಧನ<br>7. ಜನನಿ ಶಿಶು ಸುರಕ್ಷಾ ಕಾರ್ಯಕ್ರಮ.<br>8. ಪ್ರಧಾನ ಮಂತ್ರಿ ಮಾತೃತ್ವ ಸುರಕ್ಷಾ ಅಭಿಯಾನ.<br>9. ಲಸಿಕಾ ಕಾರ್ಯಕ್ರಮಗಳು<br>10. ಕುಟುಂಬ ಕಲ್ಯಾಣ ಕಾರ್ಯಕ್ರಮ.<br>11. ರಾಷ್ಟ್ರೀಯ ಬಾಲ ಸ್ವಾಸ್ಥ ಕಾರ್ಯಕ್ರಮ.<br>12. ರಾಷ್ಟ್ರೀಯ ಕಿಶೋರಿ ಸ್ವಾಸ್ಥ ಕಾರ್ಯಕ್ರಮ.<br>13. ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ.<br>14. ರಾಷ್ಟ್ರೀಯ ಉಚಿತ ಔಷಧ ಸೇವೆ.<br>15. ದಂತ ಭಾಗ್ಯ ಕಾರ್ಯಕ್ರಮ.<br>16. ಆಯುಷ್ಯಮಾನ ಭಾರತ ಆರೋಗ್ಯ ಕರ್ನಾಟಕ ಯೋಜನೆ.<br>17. ಡಯಾಲಿಸಿಸ್<br>18. ಐಸಿಯು |

| | | |
|---|---|---|
| | | 19. ಪೌಷ್ಠಿಕಾಂಶ ಪುನಶ್ಚೇತನ ಕೇಂದ್ರ<br>20. ಮಲೇರಿಯಾ ನಿಯಂತ್ರಣ ಕಾರ್ಯಕ್ರಮ.<br>21. ಕುಷ್ಠರೋಗ ನಿಯಂತ್ರಣ ಕಾರ್ಯಕ್ರಮ.<br>22. ಅಂದತ್ವ ನಿಯಂತ್ರಣ ಕಾರ್ಯಕ್ರಮ.<br>23. ಮಾನಸಿಕ ಆರೋಗ್ಯ ನಿಯಂತ್ರಣ ಕಾರ್ಯಕ್ರಮ.<br>24. ಎನ್.ಪಿ.ಸಿ.ಡಿ.ಸಿ.ಎಸ್ ಕಾರ್ಯಕ್ರಮ<br>25. ಐ.ಡಿ.ಎಸ್.ಪಿ ಕಾರ್ಯಕ್ರಮ<br>26. ತಂಬಾಕು ನಿಯಂತ್ರಣ ಕಾರ್ಯಕ್ರಮ ಮತ್ತು ಇತ್ಯಾದಿ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ. |
| ಆ | ಈ ಸೇವೆಗಳ ಸೌಲಭ್ಯ ಪಡೆಯಲು ಇರುವ ಮಾನದಂಡಗಳೇನು; (ವಿವರ ನೀಡುವುದು) | ಬಡವರು ಮತ್ತು ಅಶಕ್ತರಿಗೆ ಒದಗಿಸುತ್ತಿರುವ ಆರೋಗ್ಯ ಸೇವೆಯನ್ನು ಪಡೆಯಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಿ ಸಾರ್ವಜನಿಕರಿಗೆ ಉಚಿತವಾಗಿ ನೀಡಲಾಗುವುದು.<br>1) ಜನನಿ ಸುರಕ್ಷಾ ಯೋಜನೆ ಕಾರ್ಯಕ್ರಮದಡಿಯಲ್ಲಿ ಬಿ.ಪಿ.ಎಲ್ / ಎಸ್.ಸಿ. ಮತ್ತು ಎಸ್.ಟಿ ಫಲಾಭವಿಗಳಾಗಿರುತ್ತಾರೆ.<br>2) ಕುಟುಂಬ ಕಲ್ಯಾಣ ಕಾರ್ಯಕ್ರಮದಡಿಯಲ್ಲಿ ಎ.ಪಿ.ಎಲ್/ ಬಿ.ಪಿ.ಎಲ್ ಕುಟುಂಬಗಳು ಸೇವೆಗಳು ಪಡೆಯಬಹುದಾಗಿದೆ.<br>3) ಆಯುಷ್ಯಮಾನ ಭಾರತ ಆರೋಗ್ಯ ಕರ್ನಾಟಕ ಯೋಜನೆ ಅಡಿಯಲ್ಲಿ ಬಿ.ಪಿ.ಎಲ್ ಕುಟುಂಬಗಳು ರೂ.5 ಲಕ್ಷದವರೆಗೆ 1650 ಚಿಕಿತ್ಸಾ ಕ್ರಮಗಳಿಗೆ ಚಿಕಿತ್ಸೆಯನ್ನು ಪಡೆಯಬಹುದಾಗಿರುತ್ತದೆ ಹಾಗೂ ಎ.ಪಿ.ಎಲ್ ಕುಟುಂಬದವರು 1650 ಚಿಕಿತ್ಸಾ ಕ್ರಮಗಳಿಗೆ ಚಿಕಿತ್ಸೆಯ ಮೊತ್ತದ ಶೇ.30 ರಷ್ಟು ಉಚಿತವಾಗಿ ಪಡೆಯಬಹುದಾಗಿರುತ್ತದೆ.<br>4) ಇನ್ನುಳಿದ ಸೇವೆಗಳನ್ನು ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನೀಡಲಾಗುತ್ತಿದೆ.<br>5) ಆಯ್ದ ಸೇವೆಗಳಿಗೆ ಬಿಪಿಎಲ್ ಕಾರ್ಡ್ ಪಡೆದು ಉಚಿತವಾಗಿ ನೀಡಲಾಗುವುದು. ಉದಾ:- ಸಿಟಿ ಸ್ಕ್ಯಾನಿಂಗ್, ರಕ್ತ ಪರೀಕ್ಷೆ ಇತ್ಯಾಧಿ ಪ್ರಯೋಗಾಲಯದ ಸೇವೆಗಳನ್ನು ಒದಗಿಸಲಾಗುತ್ತಿದೆ. |
| ಇ | ಕಳೆದ 2 ವರ್ಷಗಳಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು; ಈ ಅನುದಾನವನ್ನು ಯಾವ ಯಾವ ಉದ್ದೇಶಗಳಿಗಾಗಿ ಖರ್ಚು ಮಾಡಲಾಗಿದೆ? (ವಿವರ ನೀಡುವುದು) | ಆಯುಷ್ಮಾನ್ ಭಾರತ್- ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ಕಳೆದ 2 ವರ್ಷಗಳಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಫಲಾನುಭವಿಗಳಿಗೆ ಸರ್ಕಾರದಿಂದ ಭರಿಸಿದ ವೆಚ್ಚದ ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |

ರಾಜ್ಯ ವಲಯ ಮತ್ತು ಜಿಲ್ಲಾ ವಲಯದಿಂದ ಬಿಡುಗಡೆಗೊಳಿಸಲಾದ ಅನುದಾನ ಮತ್ತು ವೆಚ್ಚದ ವಿವರ

ರೂ. ಲಕ್ಷಗಳಲ್ಲಿ

| | 2019-20 | | 2020-21 | |
|---|---|---|---|---|
| | ಬಿಡುಗಡೆ | ವೆಚ್ಚ | ಬಿಡುಗಡೆ | ವೆಚ್ಚ |
| ಯಾದಗಿರಿ ಜಿಲ್ಲೆ | 4946.21 | 4407.25 | 5130.35 | 4950.07 |
| ಕಲಬುರಗಿ ಜಿಲ್ಲೆ | 12769.98 | 12277.67 | 13431.45 | 12231.86 |

| | | |
|---|---|---|
| | | **ಉದ್ದೇಶ:-** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳ ವೇತನ ವೆಚ್ಚಗಳಿಗಾಗಿ ಮತ್ತು ಆಸ್ಪತ್ರೆಗಳ ಸಾಮಾನ್ಯ ವೆಚ್ಚ, ಇಂಧನ ವೆಚ್ಚ, ಗುತ್ತಿಗೆ ಹೊರಗುತ್ತಿಗೆ ನೌಕರರ ಕ್ಲಿನಿಕಲ್ ಮತ್ತು ನಾನ್ ಕ್ಲಿನಿಕಲ್ ವೆಚ್ಚ, ವಿದ್ಯತ್ ವೆಚ್ಚ, ಆಸ್ಪತ್ರೆಗಳ ನಿರ್ವಹಣೆಯ ವೆಚ್ಚ, ಸಾಧನ ಸಲಕರಣೆಗಳ ವೆಚ್ಚ, ದೂರವಾಣಿ ವೆಚ್ಚಗಳಿಗಾಗಿ ಖರ್ಚು ಮಾಡಲಾಗಿದೆ.<br><br>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಿಗೆ ಬಿಡುಗಡೆಗೊಳಿಸಲಾದ ಅನುದಾನದ ವಿವರ ಈ ಕೆಳಕಂಡಂತಿದೆ:<br><br>ರೂ.ಲಕ್ಷಗಳಲ್ಲಿ. |

| ಜಿಲ್ಲೆಗಳು | 2019-20 | | 2020-21 | |
|---|---|---|---|---|
| | ಬಿಡುಗಡೆ | ವೆಚ್ಚ | ಬಿಡುಗಡೆ | ವೆಚ್ಚ |
| ಕಲಬುರಗಿ | 8312.96 | 6175.69 | 8449.81 | 7473.41 |
| ಯಾದಗಿರಿ | 3986.08 | 3208.88 | 4265.93 | 3622.79 |

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗೆ ಬಿಡುಗಡೆಗೊಳಿಸಲಾದ ಅನುದಾನದ ವೆಚ್ಚದ ವಿವರ ಹಾಗೂ ಉದ್ದೇಶಗಳನ್ನು **ಅನುಬಂಧ-02 ಮತ್ತು 03** ರಲ್ಲಿ ನೀಡಲಾಗಿದೆ.

ಆಕುಕ 44 ಎಸ್‌ಬಿವಿ 2022 (1)

(ಡಾ|| ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

## ಅನುಬಂಧ-1

**ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ**

ರಾಜ್ಯ ಸರ್ಕಾರವು ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಎಂಬ ಸಂಯೋಜಿತ ಯೋಜನೆಯನ್ನು ಭರವಸೆ ಮಾದರಿಯಲ್ಲಿ ದಿ:30.10.2018ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

**ಯೋಜನೆಯ ರೂಪುರೇಷೆಗಳು:**

1. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ ಒಟ್ಟು 1650 ನಿರ್ದಿಷ್ಟ ಚಿಕಿತ್ಸಾ ವಿಧಾನಗಳಿಗೆ ಚಿಕಿತ್ಸೆ ನೀಡಲಾಗುತ್ತದೆ.

2. ಪಡಿತರ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳು ಯೋಜನೆಯ ಅರ್ಹತಾ ಮಾನದಂಡಗಳಾಗಿವೆ.

3. ಯೋಜನೆಯ ಫಲಾನುಭವಿಗಳನ್ನು ಅರ್ಹತಾ ರೋಗಿ ಮತ್ತು ಸಾಮಾನ್ಯ ರೋಗಿ ಎಂದು ಎರಡು ವರ್ಗಗಳಾಗಿ ವಿಂಗಡಿಸಲಾಗಿದೆ.

ಅ) ಅರ್ಹತಾ ರೋಗಿ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ (ಬಿಪಿಎಲ್) "ಅರ್ಹ ಕುಟುಂಬ"ಕ್ಕೆ ಸೇರಿರುವರು ಹಾಗೂ ಈ ಹಿಂದೆ ಚಾಲ್ತಿಯಲ್ಲಿದ್ದ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆಯಡಿಯಲ್ಲಿ ನೋಂದಾಯಿತಗೊಂಡಿರುವ ಕುಟುಂಬಗಳಿಗೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ರೂ.5.00 ಲಕ್ಷಗಳವರೆಗೆ ಉಚಿತ ಚಿಕಿತ್ಸೆ ಒದಗಿಸಲಾಗುವುದು.

ಆ) ಸಾಮಾನ್ಯ ರೋಗಿ: ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ, 2013ರಡಿ "ಅರ್ಹ ಕುಟುಂಬಕ್ಕೆ" ಸೇರಿಲ್ಲದೇ ಇರುವವರು. ಇವರಿಗೆ ಸರ್ಕಾರಿ ಪ್ಯಾಕೇಜ್ ದರದ 30% ರಷ್ಟು ಇದ್ದು, ಸಹ-ಪಾವತಿಯ ಆಧಾರದ ಮೇಲೆ ಒಂದು ವರ್ಷಕ್ಕೆ ಒಂದು ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ.

4. ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಯೋಜನೆಯ ಅಡಿಯಲ್ಲಿ "ಎಬಿ-ಎಆರ್‌ಕೆ" ಕಾರ್ಡ್‌ನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ರೂ.10/- ಶುಲ್ಕದೊಂದಿಗೆ ನೀಡಲಾಗುತ್ತದೆ.

5. ಬೆಂಗಳೂರು ಒನ್ ಮತ್ತು ಕರ್ನಾಟಕ ಒನ್, ಸೇವಾ ಸಿಂಧು ಹಾಗೂ ಬಾಪೂಜಿ ಕೇಂದ್ರಗಳಲ್ಲಿ ರೂ.10/- ಶುಲ್ಕದೊಂದಿಗೆ ಎ4 ಅಳತೆಯ ಕಾಗದದಲ್ಲಿ ಹಾಗೂ ರೂ. 35/- ಶುಲ್ಕದೊಂದಿಗೆ ಪ್ಲಾಸ್ಟಿಕ್ ಕಾರ್ಡ್‌ನಲ್ಲಿ "ಎಬಿ-ಎಆರ್‌ಕೆ" ಕಾರ್ಡ್ ಪಡೆದುಕೊಳ್ಳಬಹುದು.

6. ರೋಗಿಗಳು ತಮ್ಮ ಪಡಿತರ ಚೀಟಿ ಮತ್ತು ಆಧಾರ್ ಕಾರ್ಡ್‌ನೊಂದಿಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಹೋಗಿ ತಪಾಸಣೆ ಮಾಡಿಸಿಕೊಳ್ಳಬೇಕು. ಅದೇ ಸರ್ಕಾರಿ ಆಸ್ಪತ್ರೆಯು ಚಿಕಿತ್ಸೆ ನೀಡುವ ಸಾಮರ್ಥ್ಯ ಹೊಂದಿದ್ದಲ್ಲಿ ಅಲ್ಲಿಯೇ ರೋಗಿಗೆ ಚಿಕಿತ್ಸೆ ನೀಡಲಾಗುವುದು.

7. ಸದರಿ ಸರ್ಕಾರಿ ಆಸ್ಪತ್ರೆಯು ಚಿಕಿತ್ಸೆ ನೀಡುವ ಸಾಮರ್ಥ್ಯವನ್ನು ಹೊಂದಿಲ್ಲದಿದ್ದರೆ ರೆಫರಲ್ ನೀಡಲಾಗುತ್ತದೆ. ರೆಫರಲ್ ಪಡೆದುಕೊಂಡ ರೋಗಿಯು ತಾನು ಇಚ್ಛಿಸುವ ಯಾವುದೇ ನೋಂದಾಯಿತ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದು.

8. ತುರ್ತು ಚಿಕಿತ್ಸೆಗಳಿಗೆ ಯಾವುದೇ ರೆಫರಲ್ ಇಲ್ಲದೆ ನೇರವಾಗಿ ನೋಂದಾಯಿತ ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯಬಹುದು.

9. ಈ ಯೋಜನೆಯಡಿ 1650 ಚಿಕಿತ್ಸಾ ಸೌಲಭ್ಯಗಳು ಲಭ್ಯವಿರುತ್ತದೆ.

<u>ಅಂಗಾಂಗ ಕಸಿ ಯೋಜನೆ:</u>

G.O.No.HFW 64 FPE 2018, ದಿ:03.12.2018 ಆದೇಶದನ್ವಯ ಕರ್ನಾಟಕದ ರಾಜ್ಯ ಬಡ/ಬಿಪಿಎಲ್ ರೋಗಿಗಳಿಗೆ ಕಿಡ್ನಿ, ಲಿವರ್ ಹಾಗೂ ಹೃದಯ ಅಂಗಾಂಗ ಕಸಿ ಯೋಜನೆಯನ್ನು ಜಾರಿಗೆ ತಂದಿದೆ.

ಯೋಜನೆಯ ರೂಪುರೇಷೆಗಳು:

1. ಈ ಯೋಜನೆಯು ಕರ್ನಾಟಕ ರಾಜ್ಯದ ಬಡವ/ಬಿಪಿಎಲ್ ರೋಗಿಗಳನ್ನು ಬಿಪಿಎಲ್ ಕಾರ್ಡ್ ಮತ್ತು ಆಧಾರ್ ಕಾರ್ಡ್‌ಗಳ ಆಧಾರದಲ್ಲಿ ಗುರುತಿಸಲಾಗುವುದು.

2. ಫಲಾನುಭವಿಯು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ (ಇನ್ಸ್‌ಟಿಟ್ಯೂಟ್ ಆಫ್ ನೆಫ್ರೋ ಯುರಾಲಜಿ, ಶ್ರೀ ಜಯದೇವ ಇನ್ಸ್‌ಟಿಟ್ಯೂಟ್ ಆಫ್ ಕಾರ್ಡಿಯೋಲಜಿ, ಪಿ.ಎಂ.ಎಸ್.ಎಸ್.ವೈ, ಇನ್ಸ್‌ಟಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರಾಲಜಿ) ಭೇಟಿ ನೀಡಬೇಕು ಮತ್ತು ಮೌಲ್ಯಮಾಪನದ ನಂತರ ಅಂಗಾಂಗ ಕಸಿಗೆ ಸಂಬಂಧಿಸಿದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ನೋಂದಣಿ ಮಾಡಲು ಆಸ್ಪತ್ರೆಯ ಅಧಿಕೃತ ಸಮಿತಿಯಿಂದ (ಆಸ್ಪತ್ರೆ ಮಟ್ಟದ /ಜಿಲ್ಲಾ/ರಾಜ್ಯಮಟ್ಟದ) ಅನುಮೋದನೆ ಪಡೆಯಬೇಕು.

3. ಮೃತದೇಹ/ಮೆದುಳು ನಿಷ್ಕ್ರಿಯಗೊಂಡವರಿಂದ ಹಾಗೂ ಜೀವಂತ ದಾನಿಗಳಿಂದ ಅಥವಾ ಹತ್ತಿರದ ಸಂಬಂಧಿಯಿಂದ ಅಂಗಾಂಗ ದಾನ ಪಡೆದುಕೊಂಡಾಗ ಅಂತಹ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆಯನ್ನು ನೋಂದಾಯಿತ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾಡಲಾಗುವುದು.

4. ಒಂದೊಮ್ಮೆ ಮೇಲೆ ತಿಳಿಸಲಾದ ಸರ್ಕಾರಿ ಆಸ್ಪತ್ರೆಗಳಿಗೆ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆ ಮಾಡುವ ಸಾಮರ್ಥ್ಯ ಇಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಿಗೆ ರೆಫರಲ್ ಮಾಡಬಹುದು.

5. ಮೃತ ಶರೀರ (ಮೆದುಳು ನಿಷ್ಕ್ರಿಯಗೊಂಡ) ಕಸಿ ಪ್ರಕರಣದಲ್ಲಿ ಅಂಗಾಂಗ ಪುನರ್ ಕೇಂದ್ರದಲ್ಲಿ ಸ್ವೀಕರಿಸುವವರ ಮತ್ತು ಲಭ್ಯತೆಯ ನೋಂದಣಿ ಪ್ರಕಾರ ಸರ್ಕಾರಿ ಅಥವಾ ಖಾಸಗಿ ನೋಂದಾಯಿತ ಆಸ್ಪತ್ರೆಗಳಲ್ಲಿ ಅಂಗಾಂಗ ಕಸಿ ಶಸ್ತ್ರ ಚಿಕಿತ್ಸೆಯನ್ನು ನಡೆಸಬಹುದು.

6. ಚಿಕಿತ್ಸಾ ವಿಧಾನಗಳ ಪೂರ್ವಾನುಮತಿ ಪ್ರಕ್ರಿಯೆ ಮತ್ತು ಸ್ವೀಕರಿಸುವ ಬಿಪಿಎಲ್/ಬಡವರು ಮುಂತಾದ ಅನ್ವಯಿಸುವ ಸ್ಥಿತಿಗತಿಗಳ ಕುರಿತಂತೆ ಜೀವ ಸಾರ್ಥಕತೆ ಸೊಸೈಟಿಯ ಹಂಚಿಕೆ ನೀತಿಯನ್ನು ಅನುಸರಿಸಲಾಗುವುದು.

7. ರೋಗಿಗಳು ನಿರ್ದಿಷ್ಟ ಅಂಗಕ್ಕಾಗಿ ಆನ್‌ಲೈನ್ ಮೂಲಕ ಜೀವಸಾರ್ಥಕತೆಯಲ್ಲಿ (http:// www.jeevasarthaka.karnataka.gov.in) ಮೃತದೇಹ / ಮೆದುಳು ನಿಷ್ಕ್ರಿಯಗೊಂಡವರ ಅಂಗಾಂಗ ಕಸಿ ಕಾರ್ಯಕ್ರಮದ ಅಡಿಯಲ್ಲಿ ನೋಂದಣಿ ಮಾಡಬಹುದು.

**ಚಿಕಿತ್ಸಾ ಮೊತ್ತ:**

- ಕಿಡ್ನಿ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 2.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಟ್ಟು ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.
- ಹೃದಯ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 10.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಟ್ಟು ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.
- ಲಿವರ್ ಅಂಗಾಂಗ ಕಸಿ ಶಸ್ತ್ರಚಿಕಿತ್ಸೆಗೆ ರೂ. 11.00 ಲಕ್ಷ + immunosuppression medication ವೆಚ್ಚ ರೂ.1.00 ಲಕ್ಷಗಳನ್ನು ಒಟ್ಟು ಫಲಾನುಭವಿಗೆ ಒಂದು ವರ್ಷಕ್ಕೆ ಒದಗಿಸಲಾಗುತ್ತದೆ.

****

ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ಕಳೆದ 2 ವರ್ಷಗಳಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ಫಲಾನುಭವಿಗಳಿಗೆ ಸರ್ಕಾರದಿಂದ ಭರಿಸಿದ ವೆಚ್ಚದ ವಿವರ

ಅನುಬಂಧ-2

| ಜಿಲ್ಲೆ | 2020--21 | | 2021--22* | |
|---|---|---|---|---|
| | ಫಲಾನುಭವಿಗಳು | ಪ್ರೀ ಆಥ್ ಅನುಮೋದಿತ ಮೊತ್ತ (ರೂ.ಲಕ್ಷಗಳಲ್ಲಿ) | ಫಲಾನುಭವಿಗಳು | ಪ್ರೀ ಆಥ್ ಅನುಮೋದಿತ ಮೊತ್ತ (ರೂ.ಲಕ್ಷಗಳಲ್ಲಿ) |
| ಕಲಬುರಗಿ | 33376 | 4301.17 | 45452 | 5016.85 |
| ಯಾದಗಿರಿ | 9056 | 257.03 | 14872 | 356.38 |
| ಒಟ್ಟು | 42432 | 4558.20 | 60324 | 5373.22 |

ಕಲಬುರಗಿ ಜಿಲ್ಲೆಯ ರೋಗಿಗಳು ಅಂಗಾಗ ಕಸಿ ಯೋಜನೆಯಡಿ ಪಡೆದುಕೊಂಡ ಚಿಕಿತ್ಸಾ ವೆಚ್ಚದ ವಿವರ

| ಫಲಾನುಭವಿಯ ಜಿಲ್ಲೆ | ಚಿಕಿತ್ಸಾ ವಿಧಾನ | | ಅಂಗಾಂಗ ಕಸಿ ವಿವರ | ಪ್ರೀ ಆಥ್ ಅನುಮೋದಿತ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| ಕಲಬುರಗಿ | ಕಿಡ್ನಿ ಅಂಗಾಂಗ ಕಸಿ | ಅಂಗಾಂಗ ಕಸಿ ಫಲಾನುಭವಿಗಳು | 2 | 3.60 |
| | | 2 ಅಂಗಾಂಗ ಕಸಿ ಫಲಾನುಭವಿಗಳ ಔಷಧಿ ಪಡೆದ ವಿವರ (Immunosuppression) | 36 | 4.20 |
| | ಒಟ್ಟು | | 38 | 7.80 |
| | ಲಿವರ್ ಅಂಗಾಂಗ ಕಸಿ | ಅಂಗಾಂಗ ಕಸಿ ಫಲಾನುಭವಿಗಳು | 1 | 11.00 |
| ಒಟ್ಟು | | | 39 | 18.80 |

ಜಿಲ್ಲಾವಾರು ಪ್ರತ್ಯೇಕ ಅನುದಾನ ಬಿಡುಗಡೆಯಾಗಿರುವುದಿಲ್ಲ, ಹಾಗೂ ಈ ಮೇಲಿನ ಯೋಜನೆಯ ಫಲಾನುಭವಿಗಳ ಉಚಿತ ಚಿಕಿತ್ಸೆಗಾಗಿ ಮೇಲ್ಕಂಡಂತೆ ವೆಚ್ಚ ಭರಿಸಲಾಗಿದೆ.

## 2019-20 ನೇ ಆರ್ಥಿಕ ಸಾಲಿನಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ವಿವರ

ರೂ.ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ಕಾರ್ಯಕ್ರಮ | ಕಲಬುರಗಿ | | ಯಾದಗಿರಿ | |
|---|---|---|---|---|---|
| | | ಬಿಡುಗಡೆಯಾದ ಅನುದಾನ | ವೆಚ್ಚ | ಬಿಡುಗಡೆಯಾದ ಅನುದಾನ | ವೆಚ್ಚ |
| 1 | RCH /ಸಂತಾನೊತ್ಪತ್ತಿ ಮತ್ತು ಮಕ್ಕಳ ಆರೋಗ್ಯ | 906.34 | 885.80 | 616.56 | 480.28 |
| 2 | Mission Flexible Pool/ಮಿಷನ್ ಫ್ಲಕ್ಸಿ ಪೂಲ್ | 6011.41 | 4120.61 | 2720.77 | 2264.04 |
| 3 | Routine Immunization & Pulse Polio programme / ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಮತ್ತು ಪಲ್ಸ್ ಪೋಲಿಯೊ ಕಾರ್ಯಕ್ರಮ | 129.00 | 92.33 | 68.38 | 34.93 |
| 4 | NIDDCP / ರಾಷ್ಟೀಯ ಅಯೋಡಿನ್ ಕೊರತೆಯ ಡಿಸಾರ್ಡರ್ಸ್ ನಿಯಂತ್ರಣ ಕಾರ್ಯಕ್ರಮ | 0.64 | 0.50 | 0.57 | 0.56 |
| 5 | IDSP/ ಐ.ಡಿ.ಎಸ್.ಪಿ | 20.84 | 18.32 | 18.84 | 13.55 |
| 6 | NVBDCP/ ಮಲೇರಿಯಾ ಮತ್ತು ಫೈಲೇರಿಯಾ ನಿಯಂತ್ರಣ ಕಾರ್ಯಕ್ರಮ | 147.87 | 90.99 | 74.10 | 54.19 |
| 7 | NLEP / ಕುಷ್ಠ ರೋಗ ನಿರ್ಮೂಲನಾ ಕಾರ್ಯಕ್ರಮ | 78.18 | 70.26 | 30.60 | 24.95 |
| 8 | RNTCP/ ಕ್ಷಯ ರೋಗ ನಿಯಂತ್ರಣಾ ಕಾರ್ಯಕ್ರಮ | 274.88 | 260.65 | 144.77 | 126.22 |
| 9 | NPCB/ಅಂಧತ್ವ ನಿಯಂತ್ರಣಾ ಕಾರ್ಯಕ್ರಮ | 97.72 | 79.82 | 62.52 | 52.06 |
| 10 | NMHP/ ಮಾನಸಿಕ ಆರೋಗ್ಯ ಕಾರ್ಯಕ್ರಮ | 18.48 | 17.94 | 17.53 | 12.94 |
| 11 | NPHCE/ ವಯಸ್ಕರ ಆರೋಗ್ಯ ಕಾರ್ಯಕ್ರಮ | 20.80 | 8.50 | 5.54 | 4.16 |
| 12 | NTCP/ತಂಬಾಕು ನಿಯಂತ್ರಣ ಕಾರ್ಯಕ್ರಮ | 20.15 | 16.96 | 20.10 | 17.41 |
| 13 | NPCDCS/ ಕ್ಯಾನ್ಸರ್, ಮಧುಮೇಹ ಮತ್ತು ಹೃದಯ ಸಂಬಂಧಿ ರೋಗಗಳ ನಿಯಂತ್ರಣ ಕಾರ್ಯಕ್ರಮ | 69.61 | 67.00 | 56.62 | 30.97 |
| 14 | NUHM/ರಾಷ್ಟೀಯ ನಗರ ಆರೋಗ್ಯ ಅಭಿಯಾನ | 517.05 | 446.01 | 149.20 | 92.63 |
| | ಒಟ್ಟು | **8312.96** | **6175.69** | **3986.08** | **3208.88** |

## 2020-21 ನೇ ಆರ್ಥಿಕ ಸಾಲಿನಲ್ಲಿ ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಿಗೆ ಬಿಡುಗಡೆಯಾದ ಅನುದಾನ ಮತ್ತು ವೆಚ್ಚದ ವಿವರ

| ಕ್ರಮ ಸಂಖ್ಯೆ | ಕಾರ್ಯಕ್ರಮ | ಕಲಬುರಗಿ | | ಯಾದಗಿರಿ | |
|---|---|---|---|---|---|
| | | ಬಿಡುಗಡೆಯಾದ ಅನುದಾನ | ವೆಚ್ಚ | ಬಿಡುಗಡೆಯಾದ ಅನುದಾನ | ವೆಚ್ಚ |
| 1 | RCH /ಸಂತಾನೊತ್ಪತ್ತಿ ಮತ್ತು ಮಕ್ಕಳ ಆರೋಗ್ಯ | 938.40 | 886.45 | 560.69 | 491.71 |
| 2 | Mission Flexible Pool/ಮಿಷನ್ ಫ್ಲಕ್ಸಿ ಪೂಲ್ | 5968.50 | 5537.97 | 3091.88 | 2649.23 |
| 3 | Routine Immunization & Pulse Polio programme / ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ ಮತ್ತು ಪಲ್ಸ್ ಪೋಲಿಯೊ ಕಾರ್ಯಕ್ರಮ | 150.58 | 123.19 | 44.59 | 40.71 |
| 4 | NIDDCP / ರಾಷ್ಟೀಯ ಅಯೋಡಿನ್ ಕೊರತೆಯ ಡಿಸಾರ್ಡರ್ಸ್ ನಿಯಂತ್ರಣ ಕಾರ್ಯಕ್ರಮ | 0.14 | 0.08 | 0.04 | 0.02 |
| 5 | IDSP/ ಐ.ಡಿ.ಎಸ್.ಪಿ | 13.11 | 8.64 | 5.53 | 5.79 |
| 6 | NVBDCP/ ಮಲೇರಿಯಾ ಮತ್ತು ಫೈಲೇರಿಯಾ ನಿಯಂತ್ರಣ ಕಾರ್ಯಕ್ರಮ | 115.85 | 81.15 | 62.27 | 56.24 |
| 7 | NLEP / ಕುಷ್ಠ ರೋಗ ನಿರ್ಮೂಲನಾ ಕಾರ್ಯಕ್ರಮ | 16.44 | 7.18 | 8.96 | 9.89 |
| 8 | RNTCP/ ಕ್ಷಯ ರೋಗ ನಿಯಂತ್ರಣಾ ಕಾರ್ಯಕ್ರಮ | 226.85 | 196.31 | 95.81 | 89.52 |
| 9 | NPCB/ಅಂಧತ್ವ ನಿಯಂತ್ರಣಾ ಕಾರ್ಯಕ್ರಮ | 59.21 | 35.39 | 10.39 | 9.32 |
| 10 | NMHP/ ಮಾನಸಿಕ ಆರೋಗ್ಯ ಕಾರ್ಯಕ್ರಮ | 23.41 | 19.96 | 13.03 | 10.14 |
| 11 | NPHCE/ ವಯಸ್ಕರ ಆರೋಗ್ಯ ಕಾರ್ಯಕ್ರಮ | 15.03 | 17.17 | 18.25 | 3.92 |
| 12 | NTCP/ತಂಬಾಕು ನಿಯಂತ್ರಣ ಕಾರ್ಯಕ್ರಮ | 14.56 | 10.74 | 10.83 | 8.68 |
| 13 | NPCDCS/ ಕ್ಯಾನ್ಸರ್, ಮಧುಮೇಹ ಮತ್ತು ಹೃದಯ ಸಂಬಂಧಿ ರೋಗಗಳ ನಿಯಂತ್ರಣ ಕಾರ್ಯಕ್ರಮ | 60.45 | 38.80 | 25.50 | 27.66 |
| 14 | NUHM/ರಾಷ್ಟೀಯ ನಗರ ಆರೋಗ್ಯ ಅಭಿಯಾನ | 436.46 | 331.74 | 119.59 | 83.95 |
| 15 | COVID-19 ECRP-I/ ತುರ್ತು ಕೋವಿಡ್-19 ನಿಯಂತ್ರಣ ಮತ್ತು ನಿರ್ವಹಣೆ-I | 167.96 | 118.31 | 102.28 | 68.72 |
| 16 | COVID-19 Risk Allowance/ವಿಶೇಷ ಭತ್ಯೆ | 233.70 | 60.35 | 92.10 | 67.29 |
| 17 | Operational Cost for front line/Health Care workers vaccine programme | 9.17 | 0.00 | 4.19 | 0.00 |
| | ಒಟ್ಟು | **8449.81** | **7473.41** | **4265.93** | **3622.79** |

# ಅನುಬಂಧ - III

| ಕ್ರ. ಸಂ | ಕಾರ್ಯಕ್ರಮಗಳು |
|---|---|
| 1 | ತಾಯಿ ಆರೋಗ್ಯ ಕಾರ್ಯಕ್ರಮ |
| 2 | ಗುಣಮಟ್ಟ ಖಾತ್ರಿ ಕಾರ್ಯಕ್ರಮ |
| 3 | ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ |
| 4 | ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿಮಾಂದ್ಯತೆ ನಿಯಂತ್ರಣಾ ಕಾರ್ಯಕ್ರಮ |
| 5 | ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ |
| 6 | ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ |
| 7 | ರಾಷ್ಟ್ರೀಯ ಬಾಯಿಯ ಆರೋಗ್ಯ ಕಾರ್ಯಕ್ರಮ |
| 8 | ರಾಷ್ಟ್ರೀಯ ಪೌಷ್ಠಿಕ ಆಹಾರ ಕಾರ್ಯಕ್ರಮ |
| 9 | ರಾಷ್ಟ್ರೀಯ ಅಯೋಡಿನ್ ಕೊರತೆಯ ನ್ಯೂನತೆಗಳ ನಿಯಂತ್ರಣ ಕಾರ್ಯಕ್ರಮ |
| 10 | ರಾಷ್ಟ್ರೀಯ ಫ್ಲೂರೋಸಿಸ್ ನಿಯಂತ್ರಣ ಕಾರ್ಯಕ್ರಮ |
| 11 | ಲಸಿಕಾ ಕಾರ್ಯಕ್ರಮ |
| 12 | ವಿಕಿರಣ ಸುರಕ್ಷತಾ ಕಾರ್ಯಕ್ರಮ |
| 13 | ರಾಷ್ಟ್ರೀಯ ಕ್ಯಾನ್ಸರ್, ಮಧುಮೇಹ, ಹೃದಯ ರಕ್ತನಾಳಗಳ ರೋಗ ಮತ್ತು ಪಾರ್ಶ್ವವಾಯು ತಡೆ ಮತ್ತು ನಿಯಂತ್ರಣ ಕಾರ್ಯಕ್ರಮ |
| 14 | ರಾಷ್ಟ್ರೀಯ ವಯೋವೃದ್ಧರ ಆರೋಗ್ಯ ಆರೈಕೆ ಕಾರ್ಯಕ್ರಮ |
| 15 | ಅರೋಗ್ಯ ಸಹಾಯವಾಣಿ – 104 ಕಾರ್ಯಕ್ರಮ |
| 16 | ರಾಷ್ಟ್ರೀಯ ಉಪಶಾಮಕ ಆರೈಕೆ ಕಾರ್ಯಕ್ರಮ |
| 17 | ರಾಷ್ಟ್ರೀಯ ಉಚಿತ ರೋಗಪತ್ತೆ ಸೇವೆಗಳು/ ರಾಷ್ಟ್ರೀಯ ಉಚಿತ ಔಷಧಿಗಳು |
| 18 | ಆಶಾ ಕಾರ್ಯಕ್ರಮ |
| 19 | ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ |
| 20 | ರಾಷ್ಟ್ರೀಯ ವೈರಲ್ ಹೈಪಟಿಟಿಸ್ ನಿಯಂತ್ರಣ ಕಾರ್ಯಕ್ರಮ |
| 21 | ಆರೋಗ್ಯ ಸಹಾಯವಾಣಿ –104 |
| 22 | ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮ |
| 23 | ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ |
| 24 | ಹವಾಮಾನ ಬದಲಾವಣೆ ಮತ್ತು ಮಾನವ ಆರೋಗ್ಯದ ಕಾರ್ಯಕ್ರಮ |
| 25 | ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮ |
| 26 | ಪ್ರಧಾನಮಂತ್ರಿ ರಾಷ್ಟ್ರೀಯ ಡಯಾಲಿಸಿಸ್ ಮತ್ತು ಐ.ಸಿ.ಯು ಕಾರ್ಯಕ್ರಮ |
| 27 | ಕುಟುಂಬ ಕಲ್ಯಾಣ ಕಾರ್ಯಕ್ರಮ |

| ಕ್ರ. ಸಂ. | ಕಾರ್ಯಕ್ರಮಗಳು |
|---|---|
| 28 | ರಾಷ್ಟ್ರೀಯ ಶ್ರವಣದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮ |
| 29 | ರಾಷ್ಟ್ರೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಾರ್ಯಕ್ರಮ |
| 30 | ಆಯುಷ್ ಕಾರ್ಯಕ್ರಮ |
| 31 | ಇ–ಆಸ್ಪತ್ರೆ |
| 32 | ಟೆಲಿ ಮೆಡಿಸಿನ್ ಕಾರ್ಯಕ್ರಮ |
| 33 | ಆರೋಗ್ಯ ನಿರ್ವಹಣೆಯ ಮಾಹಿತಿ ವ್ಯವಸ್ಥೆ / ಹೆಚ್.ಎಂ.ಐ.ಎಸ್ & ಆರ್.ಸಿ.ಹೆಚ್ ತಂತ್ರಾಂಶ |
| 34 | ಸಮಗ್ರ ರೋಗಗಳ ಕಣ್ಗಾವಲು ಯೋಜನೆ |
| 35 | ಕ್ಯಾಸನೂರು ಮಂಗನ ಖಾಯಿಲೆ |
| 36 | ರಾಷ್ಟ್ರೀಯ ರೇಬಿಸ್ ನಿಯಂತ್ರಣ ಕಾರ್ಯಕ್ರಮ |
| 37 | ಲೆಪ್ಟೋಸ್ಪೈರೋಸಿಸ್ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮ |
| 38 | ಪರಿಷ್ಕೃತ ರಾಷ್ಟ್ರೀಯ ಕ್ಷಯರೋಗ ನಿಯಂತ್ರಣ ಕಾರ್ಯಕ್ರಮ |
| 39 | ಐ.ಇ.ಸಿ–ಬಿ.ಸಿ.ಸಿ ಕಾರ್ಯಕ್ರಮ |
| 40 | ಮಕ್ಕಳ ಆರೋಗ್ಯ |
| 41 | ಗರ್ಭಧಾರಣಾ ಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆ ತಂತ್ರ ವಿಧಾನ |
| 42 | ಮುಕ್ತನಿಧಿ |
| 43 | ಆರೋಗ್ಯಕ್ಕಾಗಿ ಸಮುದಾಯದ ಸಹಭಾಗಿತ್ವ |
| 44 | ಸರ್ಕಾರೇತರ ಸಂಸ್ಥೆಯ ಕಾರ್ಯಕ್ರಮ |
| 45 | ಸಮಗ್ರ ಆರೋಗ್ಯ ಕಾರ್ಯಕ್ರಮ /ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು |
| 46 | ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಸಂಸ್ಥೆ |
| 47 | ಸಂಚಾರಿ ಆರೋಗ್ಯ ಘಟಕಗಳು |
| 48 | ಇ.ಎಂ.ಆರ್.ಐ –108 ಕಾರ್ಯಕ್ರಮ (ರಾಷ್ಟ್ರೀಯ ಆಂಬುಲೆನ್ಸ್ ಸೇವೆಗಳು) |
| 49 | ಕರ್ನಾಟಕ ರಾಜ್ಯ ಆರೋಗ್ಯ ವ್ಯವಸ್ಥೆ ಮತ್ತು ಸಂಪನ್ಮೂಲ ಕೇಂದ್ರ |
| 50 | ರಾಜ್ಯ ರಕ್ತ ಕಣ ವಿಭಾಗ |
| 51 | ರಕ್ತ ಸಂಗ್ರಹಣಾ ಘಟಕ |
| 52 | ರಕ್ತ ಸುರಕ್ಷತೆ ಮತ್ತು ರಕ್ತ ಸಂಗ್ರಹಣಾ ವಿಭಾಗ |
| 53 | ಕಟ್ಟಡ ನಿರ್ಮಾಣ |
| 54 | ವೈದ್ಯಕೀಯ ಸಲಕರಣಾ ನಿರ್ವಹಣಾ ವಿಭಾಗ |